PARIPEX - INDIAN JOURNAL OF RESEARCH | Volume-7 | Issue-11 | November-2018 | PRINT ISSN No 2250-1991

ORIGINAL RESEARCH PAPER | Arts

# KARNATAKA SHILPA KALA VAIBHAVA

## ಕರ್ನಾಟಕದ ಜಾನಪದ ನೃತ್ಯ

KEY WORDS:

**Lohit .P**

Lecturer, Department of kannada, Akshara Institute of Management Studies, Akshara Nagara, Channamumbapura, Savalanga road, Shivamogga (D), Pin- 577203, Karnataka, India.

ಶಿಲ್ಪ ಕಲೆಗಳ ತವರೂರು ಕರ್ನಾಟಕ. ಕನ್ನಡ ನಾಡನ್ನು ಒಮ್ಮೆ ಸುತ್ತಿ ಬಂದರೆ ಈ ಮಾತಿನ ವಾಸ್ತವಿಕ ಅರಿವಾಗುತ್ತದೆ. ಕರ್ನಾಟಕದಲ್ಲಿ ಆಳಿದ ಅನೇಕ ರಾಜ ವಂಶಗಳು ತಮ್ಮ ಹೆಸರನ್ನು ಶಿಲ್ಪ ಕಲೆಗಳ ಮೂಲಕ ಅಜರಾಮರನಾಗಿಸಿದ್ದಾರೆ. ಆದರಲ್ಲಿಯೂ ಚಾಲುಕ್ಯ, ಹೊಯ್ಸಳ, ವಿಜಯನಗರ ಮೊದಲಾದ ರಾಜವಂಶಗಳು ತಮ್ಮದೇ ಆದ ಪ್ರತ್ಯೇಕ ಶಿಲ್ಪ ಮಾರ್ಗವನ್ನು ಅನುಸರಿಸಿ, ಕರ್ನಾಟಕವನ್ನು ಸಿಲ್ಪಕಲೆಗಲ ಬೀಡಾಗಿಸಿವೆ.

ಕರ್ನಾಟಕದ ಆದಿಯಲ್ಲಿ ಆಳಿದ ಚಾಲುಕ್ಯ ವಂಶದವರ ಕೊಡುಗೆ ನಮ್ಮ ಶಿಲ್ಪ ಲೋಕಕ್ಕೆ ಅಮೂಲ್ಯವಾದದು. ಚಾಲುಕ್ಯರ ಪ್ರಸಿದ್ಧ ದೊರೆ ಇಮ್ಮಡಿ ಪುಲಿಕೇಶಿ ದಕ್ಷಿಣಾಪಥೇಶ್ವರ ನೆಂಬ ಬಿರುದನ್ನು ಪಡೆದಿದ್ದವನು ಇಂದಿಗೂ ಈತನ ಹಾಗೂ ಇವನ ನಂತರದ ಅರಸರ ಕಾಲದಲ್ಲಿ ಕೆತ್ತಲಾದ ಗುಹಾಂತರ ದೇವಾಲಯಗಳು ಜಗತ್ಪ್ರಸಿದ್ಧವಾಗಿದೆ. ಎಲ್ಲೋರ, ಅಜಂತಾ ದೇವಾಲಯಗಳು ಗುಹಾಂತರ ದೇವಲಯಗಳಿಂದ ಪ್ರಖ್ಯಾತವಾಗಿದ್ದರೂ, ಅವು ಸಹ ಚಾಲುಕ್ಯರದ್ದೇ ಆದರೂ ಇಂದು ಅವು ನಮ್ಮ ನಾಡಿಗೆ ಸೇರದೇ ಮಹಾರಷ್ಟ್ರದ ಒಳಗೆ ಅಡಗಿವೆ. ಬಾದಾಮಿಯ ಗುಹಾಂತರ ದೇವಾಲಯಗಳು ಈ ದೇವಾಲಯಗಳಷ್ಟು ವೈಭವೋಪೇತನಾಗಿರದೇ ಇದ್ದರೂ, ಅವುಗಳ ಶಿಲ್ಪ ರಚನಾ ಚಾತುರ್ಯ ತಲೆದೂಗಿಸುವಂತಿವೆ. ಪಟ್ಟದ ಕಲ್ಲು , ಐಹೊಳೆಗಳಂತೂ ದೇವಾಲಯಗಳಿಗೆ ಜನ್ಮಸ್ಥಳಗಳಾಗಿವೆ. ಕಾಲಿಟ್ಟೆಡೆ ಒಂದು ದೇವಸ್ಥಾನ. ಅದೂ ವಿವಿಧವಾದುದು, ಸಿಕ್ಕ ಒರಟು ನೊರಜುಗಲ್ಲಿನಲ್ಲಿ ಶಿಲ್ಪಿ ವರೇಣ್ಯರು ತಮ್ಮ ಕಲ್ಪನೆಯನ್ನು ಹುಸಿದ್ದರೆ ಬಾದಾಮಿಯ ಶೈವ ಗುಹೆ, ವೈಷ್ಣವ ಗುಹೆ, ಜೈನ ಗುಹೆ ಒಂದೊಂದು ಒಂದೊಂದು ಇತಿಹಾಸದ ವಿಶಿಷ್ಟತೆಗೆ ಉದಾಹರಣೆಯಾಗಿವೆ. ಹೆಬ್ಬಂಡೆಯನ್ನು ಕೆತ್ತಿ ಮಾಡಿರುವ ಈ ದೇವಾಲಯಗಳು ಜಗತ್ತಿನ ಆಶ್ಚರ್ಯಗಳಲ್ಲಿ ಒಂದಾಗಿವೆ.

ಕರ್ನಾಟಕದ ಶಿಲ್ಪ ಕಲಾ ವೈಭವ ಮುಗಿಲನ್ನು ಮುಟ್ಟಿದ್ದು ಹೊಯ್ಸಳ ವಿಷ್ಣು ವರ್ಧನನ ಕಾಲದಲ್ಲಿ, ಚಾಲುಕ್ಯ ಮಾರ್ಗಕ್ಕಿಂತ ಭಿನ್ನವಾದ ಹೊಯ್ಸಳ ವಾಸ್ತುಶಿಲ್ಪ ಎಲ್ಲದರಲ್ಲೂ ಅದನ್ನು ಮೀರಿಸಿದೆ. ಹೊಯ್ಸಳ ಮಾರ್ಗದ ಕೆತ್ತನೆ ನವಿರಾದುದು ಕಲ್ಲನ್ನು ಶಿಲ್ಪ ಕಲಾವಿದನಂತೆ ಬಳಸಿಕೊಂಡಿದ್ದಾನೆ. ನುಣುಪಾದ ಬಳಪದ ಕಲ್ಲು ಶಿಲ್ಪಿಯ ಕಲ್ಪನೆಯನ್ನು ಚೆನ್ನಾಗಿ ಬಿಂಬಿಸಿದೆ. ಸೋಮನಾಥಪುರ, ಹಳೆಯಬೀಡು ಬೇಲೂರು ಹೊಯ್ಸಳ ವಾಸ್ತುಶಿಲ್ಪದ ಪರಾಕಷ್ಟೆಯನ್ನು ಮೆರೆಸಿವೆ. ಬೇಲೂರಿನ ದೇವಾಲಯವಂತೂ, ಲಲಿತಕಲಾ ವಸ್ತು ಸಂಗ್ರಹಾಲಯ ವಾಗಿದೆ. ದೇವಸ್ಥಾನದ ಹೊರಗೋಡೆ, ಒಳಗೋಡೆ ಎಲ್ಲಿ ನೋಡೆದರೂ ಶಿಲ್ಪಿಯ ಕಲ್ಪನಾಚಾತುರ್ಯ ಕಂಡು ಬರುತ್ತದೆ. ಶಿಲಾಬಾಲಿಕೆಯರಂತೂ ಜಗತ್ತಿನ ಸೌಂದರ್ಯವನ್ನೆಲ್ಲಾ ತಮ್ಮಲ್ಲಿ ಅಡಗಿಸಿಕೊಂಡಿದ್ದಾನೆ. ಪ್ರತಿ ಕೆತ್ತನೆಯೂ ವ್ಯವಸ್ಥಿತವಾಗಿ, ರಾಮಾಯಣ, ಮಹಾಭಾರತದ ಕಥೆಗಳ ಮೂತಿ ಶಿಲ್ಪವಾಗಿದೆ. ಭುವನೇಶ್ವರಿಯ ಪ್ರತಿಯೊಂದು ಕಂಬ, ಜಾಲಂದರವೂ ವಿಶಿಷ್ಟವಾಗಿದೆ. ಒಂದರ ಕೆತ್ತನೆಯಮ್ತೆ ಇನ್ನೊಂದಿಲ್ಲ. ನವರಂಗವೂ ಸಹ ಹೊಯ್ಸಳರ ಸೌಂದರ್ಯ ಪ್ರಜ್ಞೆಗೆ ಸಾಕ್ಷಿಯಾಗಿದೆ. ಮೂಲಮೂರ್ತಿ ಚೆನ್ನ ಕೇಶವನಂತೂ ಜಗನ್ಮೋಹನಾಕಾರನಾಗಿದ್ದಾನೆ. ಶಿಲ್ಪಶಾಸ್ತ್ರದ ಪ್ರಮಾಣಬದ್ಧ ರಚನೆಯಿದು.

ಹಳೆಬೀಡು ಹೊಯ್ಸಳ ರಾಜಧಾನಿ ಇಲ್ಲಿನ ಶಿವದೇವಾಲಯದ ಹೊರ ಗೋಡೆ ನಕ್ಷತ್ರಾಕಾರ ತಳವಿನ್ಯಾಸ ಹೊಯ್ಸಳ ವಾಸ್ತು ಶಿಲ್ಪದ ವೈಶಿಷ್ಟ್ಯವನ್ನು ಎತ್ತಿ ತೋರಿವೆ. ದೊಡ್ಡ ಬಸವಗಳ ಕೆತ್ತನೆಯಂತೂ ನೋಡುಗರನ್ನು ಮೂಕವಿಸ್ಮಿತ ತನ್ನಾಗಿಸುತ್ತದೆ.

ಸೋಮನಾಥಪುರ ಹೊಯ್ಸಳರ ಕಥೆಯ ದುರಂತವನ್ನು ಸಾರುವಂತಿದೆ. ಇಲ್ಲಿಯ ವಿಗ್ರಹಗಳೂ ಪ್ರಮಾಣಬದ್ಧ ರಚನೆಯೇ ಆಗಿರುದ್ದರೂ, ಎಲ್ಲವೂ ಮುಸಲ್ಲಾನರ ಲೂಟಿಗೆ ಓಳಗಾಗಿವೆ.

ವಿಜಯನಗರ ಮಾರ್ಗವನ್ನು ಮುಸಲ್ಮನರ ಶೈಲಿ ಹಾಗೂ ಹೊಯ್ಸಳ ವಾಸ್ತು ಶಿಲ್ಪ ಶೈಲಿಯ ಮಿಶ್ರಣವೆನ್ನಬಹುದು. ವಿಜಯನಗರದ ಗತವೈಭಾವವನ್ನು ಸಾರುತ್ತಾ ಇಂದಿಗೂ ಶಿಲ್ಪರಚನೆಯು ಹಂಪೆಯಲ್ಲಿದೆ. ಕೃಷ್ಣದೇವರಾಯನ ಕಾಲದ ವೈಭವವನ್ನು ಪ್ರತಿಯೊಂದು ಕಲ್ಲೂ ನಮಗಿಲ್ಲಿ ಕೂಗಿ ಹೇಳುತ್ತದೆ. ಹಜಾರ ರಾಮಸ್ವಾಮಿ ದೇವಸ್ಥಾನ, ವಿಜಯವಿಠಲರಾಯನ ದೇವಸ್ಥಾನ, ವಿರೂಪಾಕ್ಷನ ದೇವಸ್ಥಾನ, ಸಾಸುವೆ ಗಣಪತಿ, ಕಡಲೆಕಾಳಿನ ಗಣಪತಿ ಇಲ್ಲಿನ ಪ್ರಖ್ಯಾತ ಶಿಲ್ಪಗಳಾಗಿವೆ. ಆದರೆ ಪ್ರತಿಯೊಂದೂ ಭಿನ್ನವಾಗಿವೆ.

ಮುಸಲ್ಮಾನರ ವಾಸ್ತುಶಿಲ್ಪಿವನ್ನು ಸಾರಿಹೇಳುತ್ತಿದೆ. ಬಿಜಾಪುರದ ಗೋಳ ಗುಮ್ಮಟ. ವಿಶಾಲವಾದ ಈ ಗುಮ್ಮಟದಲ್ಲಿ ಧ್ವನಿಪ್ರಸಾರದ ವೈಜ್ಞಾನಿಕ ಅಳವಡಿಕೆ ಅತ್ಯಾಶ್ಚರ್ಯಕರವಾಗಿದೆ.

ಕಾರ್ಕಳ, ಶ್ರವಣಬೆಳಗೊಳ, ವೇಣೂರ ಈ ಸ್ಥಳಗಳ ಗೊಮ್ಮಟೇಶ್ವರನ ಪ್ರತಿಮೆಗಳಿಗೆ ಹೆಸರುಗೊಂಡಿವೆ. ಒಂದೇ ಕಲ್ಲಿನಿಂದ ಕೊರೆದು, ಕೆತ್ತಿ ರಚಿಸಿದ ಸುಂದರ ವಿಗ್ರಹಗಳ ಇಲ್ಲಿಯ ಶಿಲ್ಪಕಲಾ ನೈಪುಣ್ಯವು ವಿಶೇಷಮಟ್ಟದ್ದಾಗಿದೆ.

ಈಗಿನ ವಾಸ್ತುಶಿಲ್ಪಗಳಲ್ಲಿ ವಿಧಾನಸೌಧ, ಮೈಸೂರಿನ ಸೈಂಟ್ ಪಿಲೋಮನ ಚರ್ಚ, ಕನ್ನಂಬಾಡಿಯ ಅಣಿಕಟ್ಟು, ಬೃಂದಾವನ ಇವು ಪ್ರೇಕ್ಷಣೀಯ ಸ್ಥಳಗಳಾಗಿವೆ, ಹೀಗೆ ನಮ್ಮ ಕರ್ನಾಟಕವು ವಿವಿಧ ರೀತಿಯ ಶಿಲ್ಪಕಲೆಗಳಿಂದ ಶೋಭಿಸುತ್ತಿರುವ ನಾಡೆನ್ನಬಹುದು.

-: ಆಧಾರ ಗ್ರಂಥ :-

್ಡ ಕರ್ನಾಟಕ ಸಂಗಾತಿ